ಅವಶ್ಯಕತೆ ಪ್ರಾಥಮಿಕ ಅರ್ಹತೆಗಳಿಲ್ಲ. ಒಬ್ಬ ಸ್ವಾಮಿ ಇದ್ದಾರೆ, ಒಂದು ಲಕ್ಷಕ್ಕಿಂತ ಕಡಿಮೆ ತಗೆದುಕೊಳ್ಳುವರೇ ಇಲ್ಲ. ಮಠಾಧಿಪತಿಗಳಿಗೆಲ್ಲಾ ಸ್ಕೂಲಿಗೆ ಲಕ್ಷಗಟ್ಟಲೆ ಹಣಬೇಕು.

ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿ : ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಪಂಗಡದ ಒಂದು ಶಾಲೆಗೆ, ಈಗ್ಗೆ ಹತ್ತು ವರ್ಷಗಳ ಹಿಂದೆ, ಏಳುವರ್ಷದ ನಂತರ ಅನುದಾನವನ್ನು ಕೊಡಲಾಗುವುದೆನ್ನುವ ಆಕರಾರಿನ ಮೇಲೆ ಅನುಮತಿ ಕೊಟ್ಟಿದ್ದು, ಇವತ್ತಿಗೆ ಹತ್ತುವರ್ಷಗಳಾಗಿದ್ದರೂ ಅನುದಾನವನ್ನು ಕೊಟ್ಟಿಲ್ಲ. ಅಲ್ಲಿರುವಂತಹ ಶಿಕ್ಷಕರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಏಳು ವರ್ಷದಲ್ಲಿ ಅನುದಾನ ಸಿಗುತ್ತದೆಂದು ಶಿಕ್ಷಕರಿಂಗೆ ಹಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದಾರೆ, ಅವರಿಗೆ ಮಕ್ಕಳಾಗಿದ್ದಾವೆ, ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಅವರ ಮುಖವನ್ನಾದರೂ ನೋಡಿ, ಏನು ಏಳು ವರ್ಷಗಳ ತರುವಾಯ ಅನುದಾನವನ್ನು ಕೊಡಲಾಗುವುದೆಂದು ಹೇಳಲಾಗಿತ್ತು ಅದಕ್ಕಾದರೂ ಕೊಡಬೇಕೆಂದು ತಮ್ಮ ಮುಖಾಂತರ ಏನಂತೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅಲ್ಲ, ಕನ್ಯಮನ್ನು ಕೊಟ್ಟು ಅವರು ಮಕ್ಕಳು ಮಾಡಿಕೊಂಡಿದ್ದಕ್ಕೆಲ್ಲಾ ಸರ್ಕಾರದ ಮೇಲೆ ಬಂದು ಬಿದ್ದರೆ, ಗೋವಿಂದೇಗೌಡರು ಏನು ಮಾಡುತ್ತಾರೆ, ಅವರು ಮೊದಲೇ ಭಯಸ್ಥರು.

ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿ : ದಯಮಾಡಿ, ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿ ಸಾರ್.

ಅಧ್ಯಕ್ಷರು : ನಾನು ಏನು ಮಾಡಲಿ ಏಂದು ಹೇಳಿ.

ಶ್ರೀ ಡಿ. ಜಿ. ಗೋವಿಂದೇಗೌಡ : ಅಧ್ಯಕ್ಷರೆ, ಸಾವಿರದ ಒಂಭೈನೂರು ಎಂಭತ್ತಾರು-ಎಂಭತ್ತೇಳರಿಂದ ಈಚೆಗೆ ಯಾವ ಪಾಠ ಶಾಲೆ ಪ್ರಾರಂಭವಾಗಿದೆ ಅದಕ್ಕೆ ಶಾಶ್ವತ ಅನುದಾನರಹಿತವ ಆಧಾರವ ಮೇಲೆಯೇ ಅನುಮತಿಯನ್ನು ಕೊಟ್ಟಿರುವಂತಹದ್ದು. ಅದನ್ನು ನಾನು ಮೊದಲು ಎರಡು ಸಾರಿ ಹೇಳಿದ್ದುದು, ಇದು ಮೂರನೆ ಸಾರಿ ಹೇಳುತ್ತಿರುವಂಥದ್ದು, ಶಾಶ್ವತ ಅನುದಾನರಹಿತ ಶಾಲೆಗಳಿಗೆ ಸರ್ಕಾರದಿಂದ ಯಾವುದೇ ರೀತಿಯ ಅನುಕೂಲವನ್ನು ಒದಗಿಸಲಿಕ್ಕೆ ಸಾಧ್ಯವಿಲ್ಲ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ : ಅಧ್ಯಕ್ಷರೆ, ನಾನು ಅನುದಾನ ರಹಿತ ಶಾಲೆಗೆ ಕೊಡಿ ಎಂದು ಹೇಳುತ್ತಿಲ್ಲ, ಅವರು ಏಳು ವರ್ಷದ ನಂತರ ಅನುದಾನ ಕೊಡುತ್ತೇವೆಂದು ಹೇಳಿದ್ದಾರೆ ಅದನ್ನಾದರು ಕೊಡಿ ಎಂದು ನಾನು ಹೇಳುತ್ತೇನೆ.

ತೀರ್ಥಹಳ್ಳಿಯ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆಯ ಬಗ್ಗೆ

160 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಜಯಚಾಮರಾಜೇಂದ್ರ ಆಸ್ಪತ್ರೆಗೆ ಅತ್ಯಧಿಕ ರೋಗಿಗಳು ಬರುತ್ತಿದ್ದು, ಇಲ್ಲಿನ

ಒಳರೋಗಿಗಳ ಸಂಖ್ಯೆ ಹಾಸ್ಟೆ ಇರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಈ ಪಿನ್ನಲೆಯಲ್ಲಿ ಜೆ.ಸಿ. ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 100 ಹಾಸಿಗೆಗಳಿಗೆ ಏರಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):

ಆ) ಗಮನಕ್ಕೆ ಬಂದಿದೆ.

ಆ) ವಿಶ್ವಬ್ಯಾಂಕ್ ಆರ್ಥಿಕ ನೆರವು ಯೋಜನೆಯಡಿಯಲ್ಲಿ ಜೆ.ಸಿ. ಆಸ್ಪತ್ರೆಯ ಹಾಸಿಗೆ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆಯಲ್ಲಿದೆ. ಏಪ್ರಿಲ್ 1996 ರಿಂದ ವಿಶ್ವ ಬ್ಯಾಂಕ್ ನೆರವು ಕೆಲಸ ಪ್ರಾರಂಭವಾಗುವುದು.

ಇ) ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ತೀರ್ಥಹಳ್ಳಿ ಜಯಚಾಮರಾಜೇಂದ್ರ ಆಸ್ಪತ್ರೆಗೆ ಅತ್ಯಧಿಕ ರೋಗಿಗಳು ಬರುತ್ತಿದ್ದು, ಇಲ್ಲಿನ ಒಳರೋಗಿಗಳ ಸಂಖ್ಯೆ ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ತೀರ್ಥಹಳ್ಳಿ ಬಂದೇ ತಾಲ್ಲೂಕು ಅಲ್ಲದೆ, ಕೊಪ್ಪ, ಶೃಂಗೇರಿ ಮತ್ತು ಎನ್.ಆರ್. ಪುರ ತಾಲ್ಲೂಕುಗಳಿಂದಲೂ ರೋಗಿಗಳು ಬರುತ್ತಿದ್ದಾರೆ. ಮತ್ತು ಕ್ಯಾಶನೂರು ಫಾರೆಸ್ಟ್ ಡಿಸೀಸಿನಿಂದ ಅಪಾರವಾದ ಹಾನಿಯನ್ನು ಅನುಭವಿಸುತ್ತಿರತಕ್ಕಂಥ ಮಲೆನಾಡಿನ ಈ ಕೇಂದ್ರ ಭಾಗದಲ್ಲಿರತಕ್ಕಂಥ ಜಯಚಾಮರಾಜೇಂದ್ರ ಆಸ್ಪತ್ರೆಗೆ ಸುಮಾರು ಇನ್ನೂರು ಐವತ್ತರಿಂದ ಮೂನ್ನೂರು ರೋಗಿಗಳು ಇವತ್ತು ತಪಾಸಣೆಗೋಸ್ಕರ ಬರುತ್ತಿದ್ದಾರೆ. ಆಮೇಲೆ ಆ ಆಸ್ಪತ್ರೆಗೆ ಐವತ್ತೇ ಹಾಸಿಗೆಯ ಸಾಮರ್ಥ್ಯವಿದ್ದರೂ ಕೂಡ ಇವತ್ತಿನ ದಿವಸ ನೂರಾರರಿಗೆ ದೃಷ್ಟಿಯಿಂದ ರೋಗಿಗಳನ್ನು ಚಿಕಿತ್ಸೆಯನ್ನು ಕೊಡುತ್ತಿದ್ದಾರೆ. ರೋಗಿಗಳಿ ಮಲಗುವುದಕ್ಕೆ ಹಾಸಿಗೆಗಳಿಲ್ಲಾ, ಕೆಳಗಡೆ ಎಲ್ಲೆಲ್ಲೋ ರೋಗಿಗಳನ್ನು ಮಲಗಿಸಿ ಚಿಕಿತ್ಸೆ ಕೊಡುವಂತಹ ಸಂದರ್ಭದಲ್ಲಿ ವಿಶ್ವಬ್ಯಾಂಕ್ ಆರ್ಥಿಕ ನೆರವು ಯೋಜನೆಯಡಿಯಲ್ಲಿ ಜೆ.ಸಿ. ಆಸ್ಪತ್ರೆಯ ಹಾಸಿಗೆ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ ಎಂದು ಹೇಳುತ್ತೀರಿ. ಈ ಕಾರ್ಯಕ್ರಮ ಏಪ್ರಿಲ್ ತಿಂಗಳಲ್ಲೇ ಜಾರಿಗೆ ಬರುತ್ತಿದೆ. ಹಾಗಾದರೆ, ಈಗಾಗಲೇ ಲೇಟ್ ಆಗಲಿಲ್ಲವೇ? ಈ ಆಸ್ಪತ್ರೆ ಆ ಪಟ್ಟಿಯಲ್ಲಿ ಸೇರಿದೆಯೇ? ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ಎಂದು ಕೇಳಿದಾಗ, ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದೆಂದು ಉತ್ತರ ಕೊಟ್ಟಿದ್ದೀರಿ. ಈ ಮೊದಲನ ಹಂತ ಯಾವಾಗಿನಿಂದ ಪ್ರಾರಂಭವಾಗುತ್ತದೆ?

ಶ್ರೀ ಎಂ.ಪಿ. ನಾಣಯ್ಯ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಈ ಆಸ್ಪತ್ರೆ ಏಂದು ಪ್ರಮುಖವಾಗಿರತಕ್ಕಂಥ ಆಸ್ಪತ್ರೆ ಎಂದು ಹೇಳುತ್ತಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ಈ ಆಸ್ಪತ್ರೆಯನ್ನು ವಿಶ್ವ ಬ್ಯಾಂಕಿನ ಆರ್ಥಿಕ ನೆರವು ಯೋಜನೆಯ

ಕರಡು ಯೋಜನೆಯಲ್ಲಿ ಈ ಆಸ್ಪತ್ರೆಯೂ ಸೇರಿದೆ. ಇದು 1ನೇ ಏಪ್ರಿಲ್ 1996 ರಿಂದ ಚಾಲಿಗೆ ಬರುತ್ತಿದೆ. ಈಗಾಗಲೇ ವಿಶ್ವಬ್ಯಾಂಕಿನ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಆಗುತ್ತಿದೆ. ಚರ್ಚೆಗ ಸಮಯನ್ನು ಇನ್ನು ಒಂದು ತಿಂಗಳೊಳಗೆ ಮಾಡಿ ಏಪ್ರಿಲ್ ಒಂದರಿಂದ ಇದು ಚಾಲಿಗೆ ಬರುತ್ತದೆ. ಇದನ್ನು ನೂರು ಪಡ್ಡಿನ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡತಕ್ಕಂಥಾವ್ಯಕ್ಕೆ ಆ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಮತ್ತು ಇಲಾಖೆಯ ಅಧಿಕಾರಿಗಳು ಕೂಡ ಇದರ ಬಗ್ಗೆ ಕಾರ್ಯತತ್ಪರರಾಗಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಎ.ಆರ್. ಗ್ರಾಂಟ್ ಆಸ್ಪತ್ರೆಯ ಗ್ರಾಂಟ್ ಬಿಡಿದೆ ಇದನ್ನು ಜಾಸ್ತಿ ಮಾಡಬೇಕಾಗಿದೆ. ಯಾವುದೋ ಕಾಲದಲ್ಲಿ ಕಟ್ಟಿರತಕ್ಕಂಥ ಆಸ್ಪತ್ರೆಗಳು ಇವೆ. ಒಂದು ಕಾಪಿರಿ, ಎರಡು ಕಾಪಿರಿ ಕೊಟ್ಟರೆ ಪೈಂಟ್ ಮಾಡುವುದಕ್ಕಾಗುವುದಿಲ್ಲ, ಸುಣ್ಣಬಣ್ಣ ಮಾಡುವುದಕ್ಕಾಗುವುದಿಲ್ಲ, ಆಪರೇಷನ್ ಥಿಯೇಟರನ್ನು ಪ್ರತಿವರ್ಷ ಸರಿ ಮಾಡದೇ ಹೋದರೆ, ತಮಗೆ ಗೊತ್ತಿದೆ, ಅಲ್ಲಿ ಸರಿಯಾಗಿ ಆಪರೇಷನ್ ನಡೆಯುವುದಿಲ್ಲ. ದಯಮಾಡಿ ಇದನ್ನು ಹೆಚ್ಚಿಸುವಂಥಾದ್ದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಎಂ. ಪಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಈ ಒಂದು ಉಪ ಪ್ರಶ್ನೆ ಉದ್ಭವವಾಗದಿದ್ದರೂ, ಇದು ನಿಜ. ಮೇಸಟಿನಸ್ಸ್ ಗ್ರಾಂಟ್ ಎಂದು ಹೇಳುತ್ತಿರತಕ್ಕಂಥಾದ್ದನ್ನು ಯಾವುದೋ ಒಂದು ಕಾಲದಲ್ಲಿ ಫಿಕ್ಸ್ ಮಾಡಿರತಕ್ಕಂಥಾದ್ದು. ಈಗಾಗಲೇ ಇದನ್ನು ಕಾಮಗಾರಿ ಇಲಾಖೆಯಲ್ಲಿರತಕ್ಕಂಥ ಸಚಿವರ ಜೊತೆಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಯಾವುದೋ ಒಂದು ಕಾಲದಲ್ಲಿ ಫಿಕ್ಸ್ ಮಾಡಿರತಕ್ಕಂಥ ಮೂರು ಪರ್ಸಂಟೋ ಅಥವಾ ಒಂದು ಪರ್ಸಂಟೋ ಏನೋ ಅಷ್ಟು ಗ್ರಾಂಟನ್ನು ಕೊಡುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಕಾರ್ಯತತ್ಪರರಾಗಿದ್ದಾರೆ ಮತ್ತು ಮಂತ್ರಿಗಳು ಕೂಡ ಇದನ್ನು ಹೆಚ್ಚಿಸಬೇಕು ಎಂದು ಹೇಳುತ್ತಿರತಕ್ಕಂಥಾದ್ದನ್ನು ಅವರ ಚಿಂತನೆಯಲ್ಲಿದೆ. ಮುಂದಿನ ವರ್ಷಕ್ಕೆ ಇದರ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.

ಹನೂರು ಕ್ಷೇತ್ರದ ತಳ್ಳನೂರು ಗ್ರಾಮದಲ್ಲಿ ಆರೋಗ್ಯ ಕೇಂದ್ರ.

161 - ಶ್ರೀ ಪಿ. ನಾಗಪ್ಪ (ಹನೂರು) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹನೂರು ಕ್ಷೇತ್ರದ ತಳ್ಳನೂರು ಗ್ರಾಮದಲ್ಲಿ ಆರೋಗ್ಯ ಕೇಂದ್ರ ಯಾವಾಗ ಪ್ರಾರಂಭವಾಯಿತು?

ಆ) ಈ ಆರೋಗ್ಯ ಕೇಂದ್ರಕ್ಕೆ ಯಾವಾಗ ವೈದ್ಯರನ್ನು ನೇಮಿಸಲಾಗಿದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :

ಅ) ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರ ಮಂಜೂರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.